ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ–3/41/2023–2024
ಅಡಕ: ನಡವಳಿಗಳು(1–12)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ದಿನಾಂಕ 20–11–2023
**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 10–11–2023ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:10–11–2023ರಂದು ಬೆಳಗ್ಗೆ 11–30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ, ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಿದೆ. ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು–570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ.

ತಮ್ಮ ನಂಬುಗೆಯ

20/11/2023

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 10-11-2023 ರಂದು ಶುಕ್ರವಾರ ಬೆಳಗ್ಗೆ 11-30 ಗಂಟೆಗೆ ನಡೆದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡವಳಿ.

ಉಪಸ್ಥಿತರು:

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಡಾ. ಜಯಶಂಕರ್.ಎನ್ | – ಸದಸ್ಯರು |
| 3. | ಶ್ರೀಮತಿ ಸೌಮ್ಯಈರಪ್ಪ.ಕೆ | – ಸದಸ್ಯರು |
| 4. | ಡಾ. ಗಣೇಶ್.ಕೆ | – ಸದಸ್ಯರು |
| 5. | ಡಾ. ಅಂತೋಣಿ ಪೌಲ್‌ರಾಜ್ .ಸಿ | – ಸದಸ್ಯರು |
| 6. | ಡಾ. ಪ್ರೀಯ ಸಿ.ಜೆ | – ಸದಸ್ಯರು |
| 7. | ಶ್ರೀಮತಿ ಕೆ.ಎಂ.ಪದ್ಮಾವತಿ | – ಸದಸ್ಯರು |
| 8. | ಪ್ರೊ. ಟಿ.ಆರ್. ಮಾರುತಿ | – ಸದಸ್ಯರು |
| 9. | ಪ್ರೊ. ಎಸ್. ಮದಿಅಳಗನ್ | – ಸದಸ್ಯರು |
| 10. | ಪ್ರೊ. ಬಿ.ಮಹಾದೇವಪ್ಪ | – ಸದಸ್ಯರು |
| 11. | ಪ್ರೊ. ಎಂ.ಎ.ಶ್ರೀಧರ್ | – ಸದಸ್ಯರು |
| 12. | ಪ್ರೊ. ಡಿ.ಸೋಮರ್ ನಂದಪ್ಪ | – ಸದಸ್ಯರು |
| 13. | ಪ್ರೊ. ಎಂ.ಜಿ. ಮಂಜುನಾಥ | – ಸದಸ್ಯರು |
| 14. | ಪ್ರೊ. ನಾಗರಾಜ ನಾಯ್ಕ್ | – ಸದಸ್ಯರು |
| 15. | ಪ್ರೊ. ಡಿ.ಆನಂದ್<br>ನಿರ್ದೇಶಕರು (ಪ್ರಭಾರ)<br>ಕಾಲೇಜು ಅಭಿವೃದ್ಧಿ ಮಂಡಳಿ | – ಸದಸ್ಯರು |
| 16. | ಡಾ. ಪಿ. ಸರಸ್ವತಿ, ಗ್ರಂಥಪಾಲಕರು | – ಸದಸ್ಯರು |
| 17. | ಡಾ.ಚಂದ್ರಶೇಖರ್<br>ನಿರ್ದೇಶಕರು (ಪ್ರಭಾರ)<br>ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ | – ಸದಸ್ಯರು |
| 18. | ಪ್ರೊ. ಬಿ.ನಾಗರಾಜು,<br>ನಿರ್ದೇಶಕರು (ಪ್ರಭಾರ) ಪಿ.ಎಂ.ಇ.ಬಿ | – ಸದಸ್ಯರು |
| 19. | ಡಾ. ವೆಂಕಟೇಶ್<br>ನಿರ್ದೇಶಕರು (ಪ್ರಭಾರ)<br>ದೈಹಿಕ ಶಿಕ್ಷಣ ವಿಭಾಗ, | – ಸದಸ್ಯರು |
| 20. | ಪ್ರೊ. ಕೆ. ಸದಾಶಿವ | – ಸದಸ್ಯರು |
| 21. | ಕುಮಾರಿ ಅನುಷಾ.ಪಿ.ಜಿ | – ಸದಸ್ಯರು |
| 22. | ಶ್ರೀ ಉದಯ್.ಎಂ.ಎಲ್ | – ಸದಸ್ಯರು |
| 23. | ಪ್ರೊ. ಕೆ.ಎಂ. ಮಹಾದೇವನ್,ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 24. | ಶ್ರೀಮತಿ ರೇಖಾ ಕೆ.ಎಸ್., ಕೆ.ಎಸ್.ಎ.ಎಸ್,.<br>ಹಣಕಾಸು ಅಧಿಕಾರಿ, ಮೈ.ವಿ.ವಿ.ಮೈ | – ಸದಸ್ಯರು |
| 25. | ಶ್ರೀಮತಿ ವಿ.ಆರ್. ಶೈಲಜ, **ಕೆ.ಎ.ಎಸ್.,** | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು
3. ಶ್ರೀ ಸಿ.ಎನ್. ಮಂಜೇಗೌಡ ಎಂ.ಎಲ್.ಸಿ
4. ಶ್ರೀ ಎಂ.ಪಿ.ಕುಶಾಲಪ್ಪ, ಎಂ.ಎಲ್.ಸಿ
5. ಶ್ರೀ ಎಸ್.ಹೆಚ್.ಗಂಗೇಗೌಡ
6. ಪ್ರೊ. ಆಯಿಷಾ ಎಂ. ಶರೀಫ್
7. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್
8. ಡಾ. ಮುಜಿದಾ ಬಾನು
9. ಕುಮಾರಿ ಮುಸ್ಕಾನ್ ಬಾನು
10. ಕುಮಾರಿ ಅನು .ಎಸ್.ಜೆ
11. ಶ್ರೀ ಎಂ. ಪವನ್ ಕುಮಾರ್

ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಕುಲಸಚಿವರು ಮಾತನಾಡಿ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನೂ ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನೇಮಕಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1. ಪ್ರೊ. ಡಿ.ಸೋನರ್ ನಂದಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ಎಂ.ಜಿ. ಮಂಜುನಾಥ್, ಡೀನರು, ಕಲಾ ನಿಕಾಯ, ಸ್ನಾಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.
3. ಪ್ರೊ. ನಾಗರಾಜ ನಾಯ್ಕ್, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
4. ಶ್ರೀಮತಿ ರೇಖಾ. ಕೆ.ಎಸ್. ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ. ಕೆ. ಸದಾಶಿವ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಪ್ರೊ. ಸಿ. ವೆಂಕಟೇಶ್, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
7. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್, ಪ್ರಾಂಶುಪಾಲರು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್, ಮಾನಸಗಂಗೋತ್ರಿ, ಮೈಸೂರು-06
8. ಡಾ. ಮುಜೀದಾ ಬಾನು, ಪ್ರಾಂಶುಪಾಲರು, ವಿದ್ಯಾವಿಕಾಸ್ ಪ್ರಥಮ ದರ್ಜೆ ಕಾಲೇಜು, ಆಲನಹಳ್ಳಿ, ಮೈಸೂರು.
9. ಡಾ. ಪ್ರಿಯಾ ಸಿ.ಜಿ., ಪ್ರಾಂಶುಪಾಲರು, ಹಿಂದೂಸ್ತಾನ್ ಪ್ರಥಮ ದರ್ಜೆ ಕಾಲೇಜು, ಜೆ.ಪಿ. ನಗರ, ಮೈಸೂರು-57008.
10. ಡಾ. ಗಣೇಶ್ ಕೆ. ಪ್ರಾಂಶುಪಾಲರು, ಸೇಫಿಯಂಟ್ ವಾಣಿಜ್ಯ ಮತ್ತು ವ್ಯವಹಾರ ಕಾಲೇಜು, ವಿಜಯನಗರ, ಮೈಸೂರು.

11. ಡಾ. ಅಂಥೋನಿ ಪೌಲ್‌ರಾಜ್ ಸಿ. ಪ್ರಾಂಶುಪಾಲರು, ಶ್ರೀ ಛಾಯದೇವಿ ಬಿ.ಎಡ್ ಕಾಲೇಜು, ರಾಜೇಂದ್ರನಗರ, ಮೈಸೂರು.

12. ಶ್ರೀಮತಿ ಕೆ.ಎಂ. ಪದ್ಮಾವತಿ, ಪ್ರಾಂಶುಪಾಲರು, ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಕುವೆಂಪು ನಗರ, ಮೈಸೂರು.

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಬಿ. ಶಂಕರ್, ಡೀನರು, ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ಹೆಚ್.ಟಿ. ಬಸವರಾಜಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಡೀನರು, ಕಲಾ ನಿಕಾಯ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ವೈ.ಬಿ. ಬಸವರಾಜು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
5. ಪ್ರೊ. ಜಿ.ಆರ್. ಜನಾರ್ಧನ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಡಾ. ಜಿ. ಗೋವಿಂದರಾಜು, ಪ್ರಾಂಶುಪಾಲರು, ಮೈಸೂರು ಸಿಟಿ ಮೈನಾರಿಟಿ, ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು.
7. ಡಾ ನಿರ್ಮಲ ಎಚ್.ಎಂ. ಪ್ರಾಂಶುಪಾಲರು, ಸೇವಾ ಭಾರತಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ.
8. ಶ್ರೀ ರೋಹನ್ ವಿ., ಸಂತ ಫಿಲೋಮಿನಾ ಕಾಲೇಜು, ಮೈಸೂರು.
9. ಡಾ. ವೆಂಕಟೇಶಯ್ಯ, ಪ್ರಾಂಶುಪಾಲರು, ಶ್ರೀ ಡಿ. ದೇವರಾಜ್ ಅರಸು ಪ್ರಥಮ ದರ್ಜೆ ಕಾಲೇಜು, ಹುಣಸೂರು.
10. ಡಾ. ಕೃಷ್ಣಯ್ಯ, ನಿರ್ದೇಶಕರು, (ಪ್ರಭಾರ) ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಂತರ ಈ ಕೆಳಕಂಡ ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.1 | ದಿನಾಂಕ: 24-03-2023 ರಂದು ಜರುಗಿದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 24-03-2023 ರಂದು ಜರುಗಿದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |

| | |
|---|---|
| I.2 | ದಿನಾಂಕ: 18-10-2023 ರಂದು ಜರುಗಿದ 103ನೇ ವಾರ್ಷಿಕ ಘಟಿಕೋತ್ಸವದ ಪೂರ್ವಾಭಾವಿಯಾಗಿ ಏರ್ಪಡಿಸಿದ ಶಿಕ್ಷಣ ಮಂಡಳ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 18-10-2023 ರಂದು ಜರುಗಿದ 103ನೇ ವಾರ್ಷಿಕ ಘಟಿಕೋತ್ಸವದ ಪೂರ್ವಾಭಾವಿಯಾಗಿ ಏರ್ಪಡಿಸಿದ ಶಿಕ್ಷಣ ಮಂಡಳ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II.1 | 2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಿರುವುದನ್ನು ಅನುಸಮರ್ಥನೆಗೆ ಮಂಡಿಸುವ ಬಗ್ಗೆ |
| ತೀರ್ಮಾನ | 2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ.) ಬೆಂಗಳೂರು ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.2 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 41(6) ರ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮವನ್ನು ಘನತವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಶೈಕ್ಷಣಿಕ ಸಭೆಯು ಅನುಮೋದಿಸಿತು. |
| II.3 | **Patent Commercialized** ಆಗಿರುವ ಸಂಬಂಧ ಬಿಡುಗಡೆಯಾಗಿರುವ **Royalty** ಮೊತ್ತವನ್ನು **Inventors** ರವರಿಗೆ ನೀಡುವ ಬಗ್ಗೆ. |
| ತೀರ್ಮಾನ | ಡಾ. ಕೆ.ಎಸ್. ರಂಗಪ್ಪ, ವಿಶ್ರಾಂತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಇತರರು ಕೈಗೊಂಡಿದ್ದ **Compounds useful in inhibiting human trefoil factor3** ಮತ್ತು **small molecule inhibitors of BCL-2 associated death promoter (BAD) phosphorylation** ಸಂಶೋಧನೆಗೆ ಸಂಬಂಧಿಸಿದಂತೆ **National University of Singapore** ಇವರು **Royalty** ಮೊತ್ತವಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಬಿಡುಗಡೆ ಮಾಡಿರುವ ಮೊತ್ತ ರೂ. 5,10,330.39 ಗಳಲ್ಲಿ ಶೇ.10 ರಷ್ಟನ್ನು ವಿಶ್ವವಿದ್ಯಾನಿಲಯದ ಮೇಲ್ಕಚಾಗಿ ಉಳಿಸಿಕೊಂಡು ಉಳಿದ ಶೇ. ೯೦ರಷ್ಟನ್ನು **Patent Inventors** ರವರಿಗೆ ಹಂಚಿಕೆ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| II.4 | Board of Open Schooling & Skill Education, Sikkim ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ XII ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವ ಬಗ್ಗೆ. |
| ತೀರ್ಮಾನ | Board of Open Schooling & Skill Education, Sikkim ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ (10+2 ಅರ್ಹತೆ ಗಳಿಸಿರುವ ವಿದ್ಯಾರ್ಥಿಗಳಿಗೆ) ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದನೆ ನೀಡಿತು. |
| II.5 | ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತಹ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ. |
| | ಪ್ರೊ. ಎಂ.ಎ. ಶ್ರೀಧರ್ ಮಾತನಾಡಿ, ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತಹ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವುದರಿಂದ, ಕೆಲವೊಂದು ಸಂದರ್ಭದಲ್ಲಿ 1999 ರಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣರಾದವರು 2018ರಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಯಿತು. ಆ ಸಂದರ್ಭದಲ್ಲಿ ಅಂದಿನ ಪಠ್ಯಕ್ರಮ ಇರಲಿಲ್ಲ. ಅದೂ ಅಲ್ಲದೆ ಈಗ ಅನುಮತಿ ಕೊಟ್ಟರೆ ಇದು ಪುನರಾವರ್ತನೆಯಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಡಿ. ಆನಂದ್ ಅವರು ಮಾತನಾಡಿ, ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತಹರಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಒಂದು ಬಾರಿ ಮಾತ್ರ ಚಾಲ್ತಿಯಲ್ಲಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಕಟ್ಟಕಡೆಯ ಅವಕಾಶ ನೀಡಬಹುದೆಂದು ತಿಳಿಸಿದರು. |
| ತೀರ್ಮಾನ | ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತಹ 500 ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಚಾಲ್ತಿಯಲ್ಲಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಕಟ್ಟಕಡೆಯ ಅವಕಾಶವಾಗಿ ಇದೊಂದು ಬಾರಿ ಮಾತ್ರ ಪರೀಕ್ಷೆ ಬರೆಯಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.6 | "ಪ್ರೊ ಶೋಭಾ ಜಗನ್ನಾಥ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| | ಪ್ರೊ. ಎಂ.ಎ. ಶ್ರೀಧರ್ ಅವರು ಮಾತನಾಡಿ, ದತ್ತಿ ನಿಧಿ ಸ್ಥಾಪನೆಗೆ ಒಂದು ಲಕ್ಷ ರೂ. ಠೇವಣಿ ಇಡುವುದರಿಂದ, ಕೆಲವು ಕೋರ್ಸ್‌ಗಳಲ್ಲಿ ರ‍್ಯಾಂಕ್ ಪಡೆದವರಿಗೆ ಕನಿಷ್ಠ ನಗದು ಬಹುಮಾನ ದೊರೆಯಲಿದೆ, ಹಾಗಾಗಿ, ಪ್ರತಿ ವಿಷಯ/ಕೋರ್ಸ್‌ಗಳಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಪ್ರಥಮ ರ‍್ಯಾಂಕ್ ಗಳಿಸುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಒಂದು ಚಿನ್ನದ ಪದಕವನ್ನು ನೀಡಬೇಕೆಂದರು. ಹಾಗೂ ಆಯಾಯ ವಿಷಯಗಳಿಗೆ ಇಟ್ಟಿರುವ ದತ್ತಿ ನಿಧಿಯನ್ನು ಆಯಾಯ ವಿಷಯಗಳಿಗೆ ಮಾತ್ರ ಉಪಯೋಗಿಸಬೇಕೆಂದು ಹಾಗೂ ಬೇರೆ ವಿಷಯಗಳ ವಿದ್ಯಾರ್ಥಿಗಳಿಗೆ ನೀಡಬಾರದೆಂದು ಸಭೆಗೆ ತಿಳಿಸಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯದಿಂದ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಕೊಡಬಹುದು ಹೊರತು ಚಿನ್ನದ ಪದಕ ಕೊಡಲು ಕಷ್ಟವಾಗಲಿದೆ. ಆದ್ದರಿಂದ ಆಯಾ ವಿಷಯ/ಕೋರ್ಸ್‌ಗಳಿಗೆ ದತ್ತಿಗಳು ಸ್ಥಾಪಿಸಿರುವ ನಿಧಿಯಿಂದ ಬರುವ ನಗದನ್ನೆ ವಿದ್ಯಾರ್ಥಿಗಳಿಗೆ ನೀಡುವುದು ಸೂಕ್ತವೆಂದರು. |

| | |
|---|---|
| | ಪ್ರೊ. ಬಿ.ಮಹದೇವಪ್ಪ ಮಾತನಾಡಿ, ಹಿಂದೆ ಠೇವಣಿ ಇಟ್ಟಿರುವ ಹಣಕ್ಕೆ ಪ್ರಸ್ತುತ ಬರುತ್ತಿರುವ ಬಡ್ಡಿ ಮೊತ್ತವು ಕಡಿಮೆಯಾಗಿರುತ್ತದೆ. ಕೆಲವೊಂದು ಸಂದರ್ಭದಲ್ಲಿ 2-3 ವಿದ್ಯಾರ್ಥಿಗಳು ಸಮನಾದ ಅಂಕಗಳನ್ನು ಪಡೆದು ಪ್ರಥಮ ರ್‍ಯಾಂಕ್ ಪಡೆಯುವುದರಿಂದ, ಹಣವು ಹಂಚಿಕೆಯಾಗುವುದರಿಂದ ಇನ್ನು ಕಡಿಮೆ ನಗದನ್ನು ನೀಡಬೇಕಾಗುತ್ತದೆ. ಇದರಿಂದ ಕಾರ್ಪಸ್ ಹಣದಲ್ಲಿ ತೆಗೆದುಕೊಡಬಹುದೆಂದರು.<br><br>ಇದಕ್ಕೆ ಆಕ್ಷೇಪಿಸಿದ ಹಣಕಾಸು ಅಧಿಕಾರಿ, ಕಾರ್ಪಸ್ ಖಾತೆಯಲ್ಲಿನ ಹಣವನ್ನು ಯಾವುದೇ ಕಾರಣಕ್ಕೂ ಡ್ರಾ ಮಾಡಲಾಗದು. ಬರುವ ಬಡ್ಡಿಯನ್ನು ಮಾತ್ರ ತೆಗೆಯಬಹುದು. ಇದು ಸಾಕಾಗದಿದ್ದರೆ ಬೇರೆ ಮೂಲದಿಂದ ಹಾಕಬೇಕೆ ಹೊರತು ವಿಶ್ವವಿದ್ಯಾನಿಲಯದ ಇತರೆ ಖಾತೆಗಳಿಂದ ಭರಿಸಲಾಗುವುದಿಲ್ಲವೆಂದರು.<br><br>ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಕೆಲವರು ಇಟ್ಟಿರುವ ದತ್ತಿ ನಗದಿನಲ್ಲಿ ವಾರ್ಷಿಕ ರೂ.೮೦೦-1000 ಗಳು ಬಡ್ಡಿ ಬರುತ್ತಿದ್ದರೆ, ಒಂದು ಚಿನ್ನದ ಪದಕಕ್ಕೆ ರೂ.2,೮೦೦/-ಗಳು ಖರ್ಚಾಗುತ್ತದೆ. ಇದನ್ನು ಬೇರೆ ದತ್ತಿ ನಿಧಿಯ ಬಡ್ಡಿ ಮೊತ್ತದಿಂದ ಭರಿಸಲಾಗುತ್ತಿದೆ ಎಂದರು.<br><br>ಪ್ರೊ. ಡಿ. ಆನಂದ್ ಅವರು ಮಾತನಾಡಿ ದತ್ತಿ ಬಹುಮಾನದಡಿ ನೀಡುತ್ತಿರುವ ಚಿನ್ನದ ಪದಕ ಹಾಗೂ ನಗದು ಬಹುಮಾನವನ್ನು ನೀಡುವುದರ ಬಗ್ಗೆ ದಾನಿಗಳಿಗೆ ಯಾವ ವಿಷಯದಲ್ಲಿ ಆಸಕ್ತಿಯಿರುತ್ತದೋ ಅಂತಹವರು ಆ ವಿಷಯದ ಬಗ್ಗೆ ದತ್ತಿಯನ್ನು ಇಡುತ್ತಾರೆ. ನನಗೆ ಬೇರೆ ವಿಷಯದಲ್ಲಿ ಆಸಕ್ತಿಯಿದ್ದಾಗ ಆ ವಿಷಯದಲ್ಲಿ ದತ್ತಿಯನ್ನು ಇಡಬಹುದು. ದತ್ತಿ ಇಡುವ ದಾನಿಗಳಿಗೆ ನೀವು ಈ ಹೆಸರಿನಲ್ಲೇ ದತ್ತಿ ಇಡಬೇಕಾಗುತ್ತದೆ ಎಂದು ಹೇಳಲಾಗುವುದಿಲ್ಲ. ಜೊತೆಗೆ ಕಾರ್ಪಸ್ ಫಂಡ್‌ನಲ್ಲಿ ಇಟ್ಟಿರುವ ಮೊತ್ತವನ್ನು ಇಂತಹ ಸಂದರ್ಭದಲ್ಲಿ ಬಳಸಿಕೊಳ್ಳಬಹುದು, ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯವೇ ಹಣವನ್ನು ಭರಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಪ್ರೊ. ಎಂ.ಜಿ. ಮಂಜುನಾಥ್ ಅವರು ಮಾತನಾಡಿ ದತ್ತಿ ಬಹುಮಾನದಡಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಲೆಕ್ಟ್ರೋ ಪ್ಲೇಟಿಂಗ್ ಎನ್ನುವ ಸರ್ಟಿಫಿಕೇಟ್‌ಅನ್ನು ಚಿನ್ನದ ಪದಕಕ್ಕೆ ಬದಲಾಗಿ ಹಾಗೂ ನಗದು ಬಹುಮಾನವನ್ನು ಚೆಕ್ ಮುಖಾಂತರ ನೀಡಲಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದಲ್ಲೂ ಕೂಡ ಅದೇ ಮಾದರಿಯ ಸರ್ಟಿಫಿಕೇಟ್ ನೀಡಬಹುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ದತ್ತಿನಿಧಿ ಚಿನ್ನದ ಪದಕ ನೀಡುವ ಕುರಿತು ಪ್ರಸ್ತುತ ಕಾಲಮಾನಕ್ಕೆ ಆಗುವ ಖರ್ಚು ಆಯಾಯ ವಿಷಯಕ್ಕೆ ತಕ್ಕಂತೆ ಚಿನ್ನದ ಪದಕ ನೀಡುವ ಕುರಿತು ಪರಿಷ್ಕರಣೆ ಮಾಡಿ ಹಲವಾರು ಮಾರ್ಪಾಡುಗಳನ್ನು ಮಾಡುವ ಕುರಿತು ವಿಸ್ತೃತವಾಗಿ ಚರ್ಚಿಸಿ ವರದಿ ನೀಡಲು ಸಮಿತಿ ರಚಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.೮0 ರಷ್ಟು ಬಡ್ಡಿಯ ಹಣವನ್ನು M.Sc in Botany ಪದವಿ ಪರೀಕ್ಷೆಯಲ್ಲಿ ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ "ಪ್ರೊ ಶೋಭಾ ಜಗನ್ನಾಥ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು.<br><br>ಪ್ರಸ್ತುತ ದಾನಿಗಳು ಚಿನ್ನದ ಪದಕ ಸ್ಥಾಪನೆಗೆ ನೀಡುತ್ತಿರುವ ಹಣದ ಮೊತ್ತವು ಸಾಕಾಗದಿರುವುದರಿಂದ ಹಣದ ಮೊತ್ತವನ್ನು ಹೆಚ್ಚಿಸಲು ಹಾಗೂ ವಿಶ್ವವಿದ್ಯಾನಿಲಯದಿಂದ ಒಂದು ಪದಕವನ್ನು ನೀಡುವ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ |

| | |
|---|---|
| | ಕೈಗೊಳ್ಳಲು ಒಂದು ಸಮಿತಿಯನ್ನು ರಚಿಸುವ ಸಂಬಂಧ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಶಿಕ್ಷಣ ಮಂಡಳ ಸಭೆಯು ತೀರ್ಮಾನಿಸಿತು. |
| II.7 | 2022-2023ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಯ 3ನೇ ಸೆಮಿಸ್ಟರ್‌ನಲ್ಲಿ SEC ಪತ್ರಿಕೆಗಳಾದ India and Indian Constitution, Cultural, NSS ಪತ್ರಿಕೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | 2022-2023ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಯ 3ನೇ ಸೆಮಿಸ್ಟರ್‌ನಲ್ಲಿ SEC ಪತ್ರಿಕೆಗಳಾದ India and Indian Constitution, Cultural, NSS ಪತ್ರಿಕೆಗಳನ್ನು ಅಳವಡಿಸಿ ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಶಿಕ್ಷಣ ಮಂಡಳ ಸಭೆಯು ಅನುಸಮರ್ಥಿಸಿತು. |
| II.8 | 2022-2023ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಎರಡು ಪಟ್ಟು ಅವಧಿ ಮುಗಿದಂತಹ 05 ಬಿ.ಇಡಿ. ವಿದ್ಯಾರ್ಥಿಗಳಿಗೆ 03 ಮತ್ತು 04ನೇ ಸಮಿಸ್ಟರ್‌ಗೆ ಮರು ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಎರಡು ಪಟ್ಟು ಅವಧಿ ಮುಗಿದಂತಹ 05 ಬಿ.ಇಡಿ ವಿದ್ಯಾರ್ಥಿಗಳಿಗೆ 03 ಮತ್ತು 4ನೇ ಸೆಮಿಸ್ಟರ್‌ಗೆ ಮರುಪ್ರವೇಶ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.9 | ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ (Digital Valuation) ಬಗ್ಗೆ |
| | ಪ್ರೊ. ಕೆ.ಎಂ. ಮಹದೇವನ್, ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ವಿಕೇಂದ್ರಿಕರಿಸಿ ಡಿಜಿಟಲ್ ಮೌಲ್ಯಮಾಪನ ಮಾಡುವುದರಿಂದ, ಪ್ರಯಾಣ/ದಿನ ಭತ್ಯೆಯು ಉಳಿತಾಯವಾಗುವುದರಿಂದ ಆರ್ಥಿಕ ಹೊರೆ ತಪ್ಪುತ್ತದೆ. ಜೊತೆಗೆ ಶೀಘ್ರ ಫಲಿತಾಂಶ ಪ್ರಕಟಿಸಬಹುದೆಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಎಂ.ಎ. ಶ್ರೀಧರ್ ಅವರು ಮಾತನಾಡಿ, ಹಣದ ಉಳಿತಾಯಕ್ಕಿಂತ ವಿದ್ಯಾರ್ಥಿಗಳ ಹಿತದೃಷ್ಟಿ ಮುಖ್ಯವಾಗಿರುತ್ತದೆ ಹಾಗೂ ಡಿಜಿಟಲ್ ಮೌಲ್ಯಮಾಪನದಿಂದ ಹೆಚ್ಚಿನ ಹಣ ಉಳಿತಾಯವಾಗುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ನಾಗರಾಜ ನಾಯ್ಕ್ ಅವರು ಮಾತನಾಡಿ, 32ಕ್ಕಿಂತ ಹೆಚ್ಚು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದರೆ ಗೊಂದಲವಾಗುತ್ತದೆ. ಹಾಗೂ 40-50 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದಾಗ ಅದರ ಗುಣಾತ್ಮಕ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಎಂದು ತಿಳಿಸಿದರು. ಡಿಜಿಟಲ್ ಮೌಲ್ಯಮಾಪನದಲ್ಲಿ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗುತ್ತದೆಂದು ಸಹ ತಿಳಿಸಿದರು.<br><br>ಪ್ರೊ. ಡಿ. ಆನಂದ್ ಅವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನ ಮಾಡುವ ಯೋಜನೆ ಜಾರಿಗೊಳಿಸಲು ಕಳೆದ 15 ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಆದರೆ ಇದರಲ್ಲಿ ಕೆಲವು ಲೋಪದೋಷಗಳಿದ್ದು, ಫಲಿತಾಂಶ ನಿಖರವಾಗಿರುವುದಿಲ್ಲ. ಆದಕಾರಣ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಜಾರಿಗೊಳಿಸುವುದು ಸೂಕ್ತವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೂಲಂಕಷವಾಗಿ ಪರಾಮರ್ಶಿಸಿದರೆ ಡಿಜಿಟಲ್ ಮೌಲ್ಯಮಾಪದಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಿರುತ್ತದೆ. ಕಂಪ್ಯೂಟರ್, ಸರ್ವರ್, ಯುಪಿಎಸ್ ಸೇರಿದಂತೆ ಇತರೆ ತಂತ್ರಜ್ಞಾನ ಅಳವಡಿಕೆಗೆ ಹೆಚ್ಚಿನ ಬಂಡವಾಳ ಹೂಡಬೇಕಾಗುತ್ತದೆ. ಸದ್ಯಕ್ಕೆ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ (Digital Valuation) ಜಾರಿ ಮಾಡಲು ಪ್ರಸ್ತುತ ಸನ್ನಿವೇಶದಲ್ಲಿ ಆಗುವುದಿಲ್ಲವೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಮುಂದೂಡಲಾಯಿತು. |

| | |
|---|---|
| II.10 | ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| ತೀರ್ಮಾನ | ಸರ್ಕಾರದ ನಿರ್ದೇಶಾನುಸಾರ ತಿದ್ದುಪಡಿ ಮಾಡಿ ಸಿದ್ಧಪಡಿಸಿರುವ ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.11 | ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪ್ರೋಗ್ರಾಂಗಳ ಬೋಧನಾ ಕಾರ್ಯಭಾರ/ಅವಧಿಯ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳು/ಕೇಂದ್ರಗಳು/ಘಟಕ ಕಾಲೇಜುಗಳಲ್ಲಿ ನಡೆಸಲ್ಪಡುತ್ತಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪ್ರೋಗ್ರಾಂಗಳ ಬೋಧನಾ ಕಾರ್ಯಭಾರ/ಅವಧಿಯ ಬಗ್ಗೆ ಪರಿಶೀಲಿಸಲು ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿದ್ದು, ಸದರಿ ಸಮಿತಿಗಳು ಸಲ್ಲಿಸಿದ್ದ ಮಾರ್ಗಸೂಚಿಯನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಿ ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.12 | ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡವಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 35(3)ರ ಪ್ರಕಾರ ದಿನಾಂಕ: 24-04-2023 ರಂದು ಜರುಗಿದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.13 | ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 50(1)ರ ಪ್ರಕಾರ ಸಿದ್ಧಪಡಿಸಲಾಗಿರುವ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.14 | 2019-20ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ರ 47(3)ರಡಿ 2019-20ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಕಂಡಿಕೆವಾರು ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ವಾರ್ಷಿಕ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಮತ್ತು ಸರ್ಕಾರಿ ಲೆಕ್ಕಪರಿಶೋಧಕರಿಗೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.15 | ಹಣಕಾಸು ಸಮಿತಿಗೆ ಒಬ್ಬರು ಶಿಕ್ಷಣ ಮಂಡಳಿ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 32(1) (vi) ರ ಪ್ರಕಾರ ಪ್ರೊ. ಡಿ.ಆನಂದ್, ಪ್ರಾಧ್ಯಾಪಕರು, ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್, ಮಾನಸಗಂಗೋತ್ರಿ, ಮೈಸೂರು ಹಾಗೂ ಶಿಕ್ಷಣ ಮಂಡಳಿ ಸದಸ್ಯರು ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |

| | |
|---|---|
| II.16 | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅನುಸಾರ Regulations Governing the choice Based Credit System Semester Scheme with Multiple Entry and Exit Options in the Under-graduate and Post-graduate Degree Program ನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸುವ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅನುಸಾರ Regulations Governing the choice Based Credit System Semester Scheme with Multiple Entry and Exit Options in the Under-graduate and Post-graduate Degree Program ವಿನಿಯಮವಳಿಗಳನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.17 | ವಿಶ್ವವಿದ್ಯಾನಿಲಯದಲ್ಲಿ "ಆಲತ್ತೂರು ಕಾಳಮ್ಮ ಗೌಡಿಕೆ ಲಿಂಗೇಗೌಡ ಸ್ಮರಣಾರ್ಥ ಚಿನ್ನದ ಪದಕ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಪ್ರಕರಣ ೩೧ (೨) (X) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಂತೆ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೆ.೮೦ ರಷ್ಟು ಬಡ್ಡಿಯ ಹಣವನ್ನು M.Sc in Physics ಮತ್ತು M.Sc in Botany ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಅಂದರೆ ಎರಡು "ಆಲತ್ತೂರು ಕಾಳಮ್ಮ ಗೌಡಿಕೆಲಿಂಗೇಗೌಡ ಸ್ಮರಣಾರ್ಥ ಚಿನ್ನದ ಪದಕ" ಸ್ಥಾಪಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.18 | "ಪ್ರೊ. ಎ.ಎಸ್. ಕಾಳೇಗೌಡ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಪ್ರಕರಣ ೩೧ (X) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಂತೆ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೆ.೮೦ ರಷ್ಟು ಬಡ್ಡಿಯ ಹಣವನ್ನು M.A. in Kannada ಪದವಿ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ "ಪ್ರೊ. ಎ.ಎಸ್. ಕಾಳೇಗೌಡ ಚಿನ್ನದ ಪದಕ"ವನ್ನು ಸ್ಥಾಪಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.19 | ತಾತ್ಕಾಲಿಕ ಪ್ರಮಾಣ ಪತ್ರದ ಅವಧಿಯನ್ನು ೦೬ ತಿಂಗಳಿಂದ ಒಂದು ವರ್ಷಕ್ಕೆ ವಿಸ್ತರಿಸುವ ಬಗ್ಗೆ. |
| ತೀರ್ಮಾನ | ಸರ್ಕಾರದ ನಿರ್ದೇಶನದನ್ವಯ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ತಾತ್ಕಾಲಿಕ ಪದವಿ ಪ್ರಮಾಣಪತ್ರದ (Provisional Pass Certificate-PPC) ಮಾನ್ಯತೆಯ ಅವಧಿಯನ್ನು ೦೬ ತಿಂಗಳಿಂದ 12 ತಿಂಗಳಿಗೆ ಅಂದರೆ ಒಂದು ವರ್ಷದ ಅವಧಿಗೆ ವಿಸ್ತರಿಸಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| III.1 | Specialized ಕೋರ್ಸುಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ |
| ತೀರ್ಮಾನ | Specialized Programme ಅಡಿಯಲ್ಲಿ ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಕೆ.ಆರ್.ಮಿಲ್, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯ 1. BBA-Hons. (Hospital |

| | |
|---|---|
| | Administration) and 2. Master of Hospital Administration ಕೋರ್ಸ್‌ಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳಂತೆ ಸಿದ್ಧಪಡಿಸಲಾಗಿರುವ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examination ಗಳನ್ನು ಶಿಕ್ಷಣ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.2 | Specialized ಕೋರ್ಸುಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ |
| | ಪ್ರೊ. ಬಿ. ನಾಗರಾಜು, ನಿರ್ದೇಶಕರು, ಪಿ.ಎಂ.ಇ.ಬಿ ಇವರು ಮಾತನಾಡಿ NCTE ಯಿಂದ specialized programme ಅಡಿಯಲ್ಲಿ PG Diploma in Education ಕೋರ್ಸ್ ಅನುಮೋದನೆ ಪಡೆದಿರುವುದಿಲ್ಲ. ಈ ಸಂಬಂಧ ಪರಿಶೀಲಿಸಿದ ನಂತರ specialized programme ಅಡಿಯಲ್ಲಿ PG Diploma in Education ಕೋರ್ಸ್‌ನ್ನು ಅನುಮೋದನೆ ಪಡೆಯಲು ಸಭೆಯಲ್ಲಿ ಮುಂದಿನ ಸಭೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.<br><br>ಪ್ರೊ. ಎಸ್. ಮದಿಅಳಗನ್ ಅವರು ಮಾತನಾಡಿ, NCTE ಯಿಂದ PG Diploma in Education ಕೋರ್ಸ್‌ನ್ನು ಉಲ್ಲೇಖಿಸಿದ್ದಾರೆಯೋ ಅಥವಾ ಇಲ್ಲವೋ ಎಂದು ಪುನರ್ ಪರಿಶೀಲಿಸಬೇಕೆಂದು ತಿಳಿಸಿದರು. |
| ತೀರ್ಮಾನ | ಮುಂದೂಡಲಾಯಿತು |
| III.3 | Specialized Programme ಅಡಿಯಲ್ಲಿನ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೊದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | 2023-24ನೇ ಶೈಕ್ಷಣಿಕ ಸಾಲಿನ Specialized Programme ಅಡಿಯಲ್ಲಿ (1) ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಕೆ.ಆರ್.ಮಿಲ್, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯ B.Sc.-Hons. (Artificial Intelligence and Machine Learning) ಕೋರ್ಸ್‌ಗೆ (2) Wiztoonz Academy of Media & Design, MIT ಕ್ಯಾಂಪಸ್, 2ನೇ ಮಹಡಿ, ಬೆಳವಾಡಿ, ಶ್ರೀರಂಗಪಟ್ಟಣ ತಾ:., ಮಂಡ್ಯ ಜಿಲ್ಲೆ ಸಂಸ್ಥೆಯ B.Sc. (Hons.)(Multimedia) ಮತ್ತು M.Sc. (Multimedia Design) ಕೋರ್ಸ್‌ಗಳು (3) ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಕೆ.ಬಿ.ಎಲ್, ಲೇಔಟ್, ಮೈಸೂರು ಸಂಸ್ಥೆಯ M.Sc. (Reproductive Biology & Clinical Embryology-IVF) ಕೋರ್ಸ್‌ಗೆ ಹಾಗೂ (4) Acharya Institute for Innovation and Transformation (AIIT), 'B' ಬ್ಲಾಕ್, 18ನೇ ಮುಖ್ಯ ರಸ್ತೆ, ವಿಜಯನಗರ 3ನೇ ಹಂತ, KSOU ಶೈಕ್ಷಣಿಕ ಬ್ಲಾಕ್, ಮೈಸೂರು ಸಂಸ್ಥೆಯ 1. B.Des. (Hons.) (Vedic Architecture), 2. BCA (Hons.) (Artificial Intelligence & Machine Learning) and 3. BCA (Hons.) (Cyber Security & Data Science) ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳಂತೆ ಸಿದ್ಧಪಡಿಸಲಾಗಿರುವ ರೆಗ್ಯುಲೇಷನ್ಸ್ ಮತ್ತು ಪಠ್ಯಕ್ರಮಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.4 | Specialized Programme ಅಡಿಯಲ್ಲಿನ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೊದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | 2023-24ನೇ ಶೈಕ್ಷಣಿಕ ಸಾಲಿನ Specialized Programme ಅಡಿಯಲ್ಲಿ IIFA Lancaster Degree College, ಮಂಡ್ಯ ಸಂಸ್ಥೆಗೆ 1. B.Des. (Hons.) (Advanced Interior Designing and 3D Visualization), 2. B.Des. (Hons.) (Advance Fashion Design and Textile Design), 3. M.Sc. (Animation and VFX) and 4. M.Sc. (Game Designing, Development and Virtual Reality) ಹೊಸ ಕೋರ್ಸ್‌ಗಳಿಗೆ ಪಠ್ಯಕ್ರಮವನ್ನು ಹಾಗೂ ಇದೇ ಸಂಸ್ಥೆಯಲ್ಲಿ 2020-21ನೇ ಸಾಲಿಗೆ ಮಾನ್ಯತೆ ನೀಡಲಾಗಿದ್ದ 1. B.Sc.-Hons. (Game Designing & Development), 2. B.Sc.-Hons. (Animation & Multimedia) and 3. B.Sc.-Hons. (Visual Communication) ಕೋರ್ಸ್‌ಗಳ ಪರಿಷ್ಕೃತ ರೆಗ್ಯುಲೇಷನ್ಸ್ ಅನ್ನು ಮತ್ತು Malabar College of Optometry, # 2707/3 & 4, 2ನೇ ಮಹಡಿ, ದೇವಿನಗರ 1ನೇ ಮುಖ್ಯ ರಸ್ತೆ, ದೇವಿರಮ್ಮನಹಳ್ಳಿ, ನಂಜನಗೂಡು ಸಂಸ್ಥೆಗೆ B.Sc. (Hons.) (Optometry & Eye Care) ಹೊಸ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳಂತೆ ಸಿದ್ಧಪಡಿಸಲಾಗಿರುವ ರೆಗ್ಯುಲೇಷನ್, ಪಠ್ಯಕ್ರಮವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.5 | ವಾಣಿಜ್ಯ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ವಾಣಿಜ್ಯ ನಿಕಾಯದ Specialized Programme ಅಡಿಯಲ್ಲಿ Seemore Education Institute, ದಕ್ಷ ಕಾಲೇಜು, ಆವರಣ, ಸಿಎ-40, ಬೆಳವಾಡಿ ಹತ್ತಿರ, ಹೂಟಗಳ್ಳಿ, ಇಲವಾಲ ಹೋಬಳಿ, ಮೈಸೂರು ಸಂಸ್ಥೆಗೆ 1. B.Des-Hons. (Visual Communication & Digital Design), 2. B.Des-Hons. (Digital Product Design (Advanced UI/UX)), 3. B.Des-Hons. (Game Art & Design), 4. M.Des. (Advertising Design and digital Communication) and 5. M.Des. (Creative Innovation and Design) ಹೊಸ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳಂತೆ ಸಿದ್ಧಪಡಿಸಲಾಗಿರುವ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examination ಗಳನ್ನು ವಾಣಿಜ್ಯ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.6 | ಕಲಾ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| | ಕಲಾ ನಿಕಾಯದ Specialized Programme ಅಡಿಯಲ್ಲಿ Sera Jey Monastic Institute ಸಂಸ್ಥೆಗೆ 1. B.A. Hons. (Ancient Tibetan Language), 2. B.A.-Hons. (Ancient Philosophy) and 3. B.A.-Hons. (Ancient Psychology) ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳಂತೆ ಸಿದ್ಧಪಡಿಸಲಾಗಿರುವ ದ್ವಿತೀಯ ವರ್ಷದ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examination ಗಳನ್ನು ಕಲಾ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

ಪ್ರೊ. ಎಂ.ಎ. ಶ್ರೀಧರ್ ಮಾತನಾಡಿ, ಸದರಿ ಸಭೆಯ ಸದಸ್ಯರುಗಳಿಗೆ CD ಮುಖಾಂತರ ಕಾರ್ಯಸೂಚಿಗಳನ್ನು ಕಳುಹಿಸಿರುತ್ತೀರಿ. ಆದರೆ ಮುಂಬರುವ ದಿನಗಳಲ್ಲಿ ಸಭೆಯ ಕಾರ್ಯಸೂಚಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯದ ದಾಖಲಾತಿಗಳನ್ನು ಸಿ.ಡಿಯ ಬದಲು ವಿಶ್ವವಿದ್ಯಾನಿಲಯದ website ನಲ್ಲಿ e-link ಮುಖಾಂತರ e-mailಗೆ ಕಳುಹಿಸಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಿಸಿದರು ಹಾಗೂ ಕುಲಸಚಿವ (ಪರೀಕ್ಷಾಂಗ)ರವರಿಗೆ synopsis ನ್ನು soft copy ನಲ್ಲಿ ಕಳುಹಿಸಿಕೊಡುವಂತೆ ಸಭೆಗೆ ತಿಳಿಸಿದರು.

ಕುಲಸಚಿವರು ಮಾತನಾಡಿ, ಹಾರ್ಡ್ ಕಾಪಿ ನೀಡಬೇಕೆಂದು ಸದಸ್ಯರು ಕೋರಿದ್ದ ಹಿನ್ನೆಲೆಯಲ್ಲಿ CD ಮುಖಾಂತರ ಕಳುಹಿಸಲಾಗಿದೆ. ಇನ್ನು ಮುಂದೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಸಭೆಯ ಕಾರ್ಯಸೂಚಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯದ ದಾಖಲಾತಿಗಳನ್ನು ಇನ್ನು ಮುಂದೆ e-link ಮುಖಾಂತರ ಕಳುಹಿಸುತ್ತೇವೆ ಎಂದು ಸಭೆಗೆ ತಿಳಿಸಿದರು.

ಪ್ರೊ. ಎಂ.ಎ. ಶ್ರೀಧರ್ ಮಾತನಾಡಿ, ಪಿಎಚ್.ಡಿ ನಿಯಮಾವಳಿಯನ್ನು ಪರಿಷ್ಕರಣೆ ಮಾಡಲು ಒಂದು ಸಮಿತಿಯನ್ನು ರಚಿಸುವುದು ಸೂಕ್ತ ಎಂದು ಸಭೆಗೆ ಸಲಹೆಯನ್ನು ನೀಡಿದರು.

ಕುಲಪತಿಯವರು ಮಾತನಾಡಿ, ಇನ್ನು ಮುಂದೆ ಕಾಗದರಹಿತ ಆಡಳಿತ ನಡೆಸುವುದು ಸೂಕ್ತ ಹಾಗೂ ಪಿಎಚ್.ಡಿ ನಿಯಮಗಳಿಗೆ ಸಂಬಂಧಿಸಿದಂತೆ ಮಾರ್ಪಾಡುಗಳನ್ನು ಮಾಡುವ ಸಂಬಂಧ ಒಂದು ಸಮಿತಿಯನ್ನು ರಚಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸಹಿ/–
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಸಹಿ/–
ಕುಲಪತಿಗಳು ಹಾಗೂ ಅಧ್ಯಕ್ಷರು